ಅಸಲು ದಾವಾ ನಂ.17/2021 ಡಿಡಬ್ಲೂ : 2

ದಿನಾಂಕಃ 17-01-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ 2, 6 ಹಾಗೂ 9 ನೇ ಪ್ರತಿವಾದಿಯರ ಪರವಾಗಿಃ ಶ್ರೀ ಎಸ್ ವಿ ಎ ವಕೀಲರಿಂದಃ**

2. ಮೃತ ವಿಶ್ವೇಶ್ವರ ಮಾಣೇಶ್ವರ ಭಟ್ ಗೋಪಿರವರು ನನಗೆ ಬರೆದುಕೊಟ್ಟಿರುವ ಸಾರ್ವತ್ರಿಕ ಮೊಕ್ತಾರನಾಮೆಯನ್ನು ಹಾಜರು ಪಡಿಸಿದ್ದು ಅದನ್ನು ನಿಡಿ -31 ಎಂದು ಗುರುತಿಸಲಾಯಿತು . ಮೇಲೆ ಹೇಳಿದ ವಿಶ್ವೇಶ್ವರ ಮಾಣೇಶ್ವರ ಭಟ್ ಗೋಪಿರವರು ವಾದಿಯರ ತಂದೆಯ ಅಣ್ಣನಾಗಿರುತ್ತಾರೆ . 8 ಪಹಣಿ ಪತ್ರಿಕೆಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಡಿ-32 ರಿಂದ ನಿಡಿ-39 ಎಂದು ಗುರುತಿಸಲಾಯಿತು . ಮ್ಯುಟೇಶನ್ ವಹಿಯ ದೃಡಿಕೃತ ನಕಲನ್ನು ಹಾಜರು ಪಡಿಸಿದ್ದು ಅದನ್ನು ನಿಡಿ-40 ಎಂದು, 13 ಮ್ಯುಟೇಶನ್ ವಹಿಯ ಪ್ರತಿಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಡಿ -41 ರಿಂದ 53 ಎಂದು, ನನ್ನ ಖಾತೆ ಈಗ ಕೆನರಾ ಬ್ಯಾಂಕ್ , ಗೋಕರ್ಣ ಶಾಖೆಯಲ್ಲಿ ಇದೆ , ಹಿಂದೆ ಅದು ಸಿಂಡಿಕೇಟ್ ಬ್ಯಾಂಕಿನಲ್ಲಿ ಇತ್ತು . ಸದರಿ ನನ್ನ ಬ್ಯಾಂಕಿನಲ್ಲಿರುವ ಉಳಿತಾಯ ಖಾತೆಯ ಸ್ಟೇಟ್ ಮೆಂಟ್ ನ್ನು ಹಾಜರು ಪಡಿಸಿದ್ದು ಅದನ್ನು ನಿಡಿ -54 ಎಂದು, 16 ಭಾವ ಚಿತ್ರಗಳನ್ನು ಹಾಗೂ ಅವುಗಳ ಒಂದು ಸಿಡಿಯನ್ನು ಹಾಜರು ಪಡಿಸಿರುತ್ತೇವೆ . ಸದರಿ ದಾಖಲೆಗಳನ್ನು ರುಜುವಾತು ಪಡಿಸುವ ಶರತ್ತಿನ ಮೇರೆಗೆ ಅವುಗಳನ್ನು ನಿಡಿ -55 ರಿಂದ ನಿಡಿ-71 ಎಂದು ಗುರುತಿಸಲಾಯಿತು . ಒಂದು ವಿಡಿಯೋದ ಸಿಡಿಯನ್ನು ಹಾಜರು ಪಡಿಸಿರುತ್ತೇವೆ . ಸದರಿ ಸಿಡಿಯನ್ನು ರುಜುವಾತು ಪಡಿಸುವ ಶರತ್ತಿನ ಮೇರೆಗೆ ನಿಡಿ -72 ಎಂದು ಗುರುತಿಸಲಾಯಿತು . ಸದರಿ ಪೋಟೋ ಹಾಗೂ ವಿಡಿಯೋದ ಬಿಲ್ ನ್ನು ಹಾಜರು ಪಡಿಸಿರುತ್ತೇವೆ . ಸದರಿ ಬಿಲ್ ನ್ನು ರುಜುವಾತು ಪಡಿಸುವ ಶರತ್ತಿನ ಮೇರೆಗೆ ನಿಡಿ-73 ಎಂದು ಗುರುತಿಸಲಾಯಿತು . ನಿಡಿ -55 ರಿಂದ 71 ಭಾವ ಚಿತ್ರಗಳು ದಾವಾ ಆ ಶೆಡ್ಯೂಲ್ ಆಸ್ತಿಗಳಿಗೆ ಸಂಬಂಧಪಟ್ಟ ಭಾವ ಚಿತ್ರಗಳಾಗಿರುತ್ತವೆ . 1 ನೇ ವಾದಿಯು ನನಗೆ ಅವರ ವಕೀಲರ

ಮೂಲಕ ಕೊಟ್ಟಿರುವ ನೋಟಿಸಿಗೆ ನಾನು ನನ್ನ ವಕೀಲರ ಮುಖಾಂತರ ಉತ್ತರವನ್ನು ಕೊಟ್ಟಿದ್ದು , ಸದರಿ ಉತ್ತದ ಕಚೇರಿ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಡಿ-74 ಎಂದು ಗುರುತಿಸಲಾಯಿತು .

(ಮುಂದುವರಿದ ಮುಖ್ಯ ವಿಚಾರಣೆ ಕೋರಿಕೆಯ ಮೇರೆಗೆ ಮುಂದೂಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.